


ಕೆನರಾಬ್ಯಾಂಕ್ ಪ್ರಧಾನ ಕಚೇರಿಯಲ್ಲಿ ಬ್ಯಾಂಕ್ ಹಾಗೂ ಬ್ರಿಕ್‌ವರ್ಕ್ ರೇಟಿಂಗ್ ಏಜೆನ್ಸಿ ಯ ಮಧ್ಯೆ ನಡೆದ ಪಾಲುದಾರಿಕೆ ಒಡಂಬಡಿಕೆಯಲ್ಲಿ ಬ್ಯಾಂಕಿನ ಅಧ್ಯಕ್ಷ ಆರ್.ಕೆ. ದುಬೆ, ಏಜೆನ್ಸಿಯ ವ್ಯವಸ್ಥಾಪಕ ನಿರ್ದೇಶಕ ವಿವೇಕ ಕುಲಕರ್ಣಿ, ಬ್ಯಾಂಕಿನ ಅಧಿಕಾರಿಗಳಾದ ಎ.ಕೆ. ಗುಪ್ತ, ಕೃಷ್ಣಕುಮಾರ್ ಮುಂತಾದವರು ಉಪಸ್ಥಿತರಿದ್ದರು.

# ಕೆನರಾಬ್ಯಾಂಕ್–ಕ್ರೆಡಿಟ್ ರೇಟಿಂಗ್ ಒಪ್ಪಂದ

ಬೆಂಗಳೂರು, ಜು 9. ರಾಷ್ಟ್ರೀಕೃತ ಕೆನರಾಬ್ಯಾಂಕ್ ಇದೀಗ ಬೆಂಗಳೂರು ಮೂಲದ ಕ್ರೆಡಿಟ್ ಏಜೆನ್ಸಿಯಾದ ಬ್ರಿಕ್‌ವರ್ಕ್ ರೇಟಿಂಗ್ ಏಜೆನ್ಸಿಯ ಜೊತೆ ಪಾಲುದಾರಿಕೆ ಒಡಂಬಡಿಕೆ ಮಾಡಿಕೊಂಡಿದೆ.

ಪ್ರಸ್ತುತ 6 ಲಕ್ಷ ಕೋಟಿ ರೂ ವಹಿವಾಟು ನಡೆಸುತ್ತಿರುವ ಕೆನರಾ ಬ್ಯಾಂಕು ಈ ಒಪ್ಪಂದದಿಂದ ಏಜೆನ್ಸಿಯಲ್ಲಿ ಶೇ 10 ರಷ್ಟು ಪಾಲನ್ನು ಹೊಂದುವುದು. ಕೆನರಾ ಬ್ಯಾಂಕ್ ಪ್ರಧಾನ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಷೇರುಚಂದಾ ಒಪ್ಪಂದಕ್ಕೆ ಸಹಿ ಹಾಕಿ ಮಾತನಾಡಿದ ಬ್ಯಾಂಕಿನ ಅಧ್ಯಕ್ಷ ಆರ್. ಕೆ. ದುಬೆ,

ಈ ಏಜೆನ್ಸಿ ಬೆಂಗಳೂರು ಮೂಲದ್ದಾಗಿದ್ದು, ಬ್ಯಾಂಕು ಹಾಗೂ ಬ್ರಿಕ್ ರೇಟಿಂಗ್ ಕ್ರೆಡಿಟ್ ಏಜೆನ್ಸಿ ಇನ್ನು ಮುಂದೆ ಎಲ್ಲದರಕ್ಕೆ ಸಂಬಂಧಿಸಿದ ವಿವಿಧ ಚಟುವಟಿಕೆಗಳಲ್ಲಿ ಸಹಯೋಗ ವಹಿಸಲಿವೆ. ಅದರಲ್ಲೂ ಆಯಕಟ್ಟಿನ ಹೂಡಿಕೆ ಅಪಾಯ ನಿರ್ವಹಣೆ ಮೇಲೆ ಜಂಟಿ ಚಟುವಟಿಕೆಗಳನ್ನು ಕೈ ಗೊಳ್ಳುವದರ ಬಗ್ಗೆ ಸುಳಿವು ನೀಡಿದರು. ಈ ಒಪ್ಪಂದದಿಂದಾಗಿ ಆ ಕ್ಷೇತ್ರದಲ್ಲಿ ಸಂಶೋಧನೆ, ಆರ್ಥಿಕ ಸೇರ್ಪಡೆ, ಕ್ರೆಡಿಟ್ ರೇಟಿಂಗ್ ಮಾದರಿ ಮುಂತಾದ ವಿಷಯಗಳು ಹೆಚ್ಚಿನ ಮಹತ್ವ ಪಡೆಯಲಿವೆ.

ಸಮಾಜದ ಎಲ್ಲ ವ್ಯಕ್ತಿಗಳಿಗೆ ಸಾಲ ದೊರಕಿಸಿಕೊಡುವ ನಿಟ್ಟಿನಲ್ಲಿ ಬ್ಯಾಂಕ್ ಬದ್ಧವಾಗಿದ್ದು, ವಿಶೇಷವಾಗಿ ದೊಡ್ಡ, ಮಧ್ಯಮ, ಸಾಂಸ್ಥಿಕ ಸಾಲಗಳು, ಮಧ್ಯಮ ಉದ್ಯಮ, ಸಣ್ಣ ಉದ್ಯಮ, ವೈಯಕ್ತಿಕ, ಗ್ರಾಹಕರು, ರೈತರು, ಭೂ ರಹಿತ ಕಾರ್ಮಿಕರು, ವಿದ್ಯಾರ್ಥಿಗಳು, ಮಹಿಳೆ, ಸ್ವಸಹಾಯ ಗುಂಪುಗಳಿಗೆ ಇನ್ನು ಮುಂದೆ ಹೆಚ್ಚಿನ ಸಹಾಯ ದೊರೆಯಲಿದೆ. ಈ ಏಜೆನ್ಸಿ ಸಂಶೋಧನೆ, ದರನಿಗದಿ, ವಿತ್ತೀಯ ಸೇರ್ಪಡೆ, ಬ್ಯಾಂಕು ಸಾಲಗಳ ದರನಿಗದೀಕರಣ ಮುಂತಾದ ವಿಷಯಗಳ ಬಗ್ಗೆ ವಿಶೇಷ ಗಮನ ಹರಿಸಲಿದೆ ಎಂದು ಹೇಳಿದರು.

ಬ್ರಿಕ್‌ವರ್ಕ್ ರೇಟಿಂಗ್ ಏಜೆನ್ಸಿಯ ವ್ಯವಸ್ಥಾಪಕ ನಿರ್ದೇಶಕ ವಿವೇಕ ಕುಲಕರ್ಣಿ ಮಾತನಾಡಿ, ನೂರು ವರ್ಷಗಳ ಇತಿಹಾಸವುಳ್ಳ ಕೆನರಾಬ್ಯಾಂಕ್ ಜೊತೆ ಕೆಲಸ ಮಾಡಲು ನಮ್ಮ ಸಂಸ್ಥೆ ತೀರ ಉತ್ಸುಕತೆ ಹೊಂದಿದೆ.

ಈ ಕ್ಷೇತ್ರದಲ್ಲಿ ಸಂಶೋಧನೆ, ಆರ್ಥಿಕ ಸಾಕ್ಷರತೆಗೆ ಬದ್ಧವಾಗಿರುವುದಾಗಿ ಹೇಳಿದರು.

ಬ್ಯಾಂಕಿನ ಕಾರ್ಯನಿರ್ವಹಣಾ ನಿರ್ದೇಶಕ ವಿ.ಎಸ್. ಕೃಷ್ಣಕುಮಾರ್, ಅಧಿಕಾರಿ ಎ.ಕೆ. ಗುಪ್ತ ಮುಂತಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.